ಲಂಕೇಶ್ ಅನುವಾದಿಸಿದ 'ದೊರೆ ಈಡಿಪಸ್'ದಲ್ಲಿ ಈಡಿಪಸ್‌ನಾಗಿ ಗಿರೀಶರ ಅಭಿನಯವನ್ನು ನೋಡಿ ಪ್ರೇಕ್ಷಕರೆಲ್ಲ ದಂಗಾಗಿದ್ದರು. ಒಬ್ಬ ಅದ್ಭುತ ನಟ ಅವತರಿಸಿದ್ದ. ರಂಗದ ಮೇಲಿನ ಗಿರೀಶರ ಅಭಿನಯ ಮತ್ತು ದೂರದರ್ಶನ ಅಥವಾ ಸಿನೆಮಾಗಳಲ್ಲಿಯ ಅವರ ನಟನೆಗಳಲ್ಲಿ ಬಹಳ ಅಂತರವಿದೆ. ಗಿರೀಶರ ರಂಗಾಭಿನಯದ ಜೀವಂತಿಕೆ ಚಿತ್ರಪಟಗಳಲ್ಲಿ ಸಪ್ಪೆಯೆನಿಸುತ್ತದೆ. ಅವರೊಡನೆ ನಡೆಸಿದ ಚರ್ಚೆಯಲ್ಲಿ ಸ್ವತಃ ಗಿರೀಶ ನನ್ನ ಈ ಅನಿಸಿಕೆಯನ್ನು ನಿರಾಕರಿಸಲಿಲ್ಲ. "ನಾನು ಯಶಸ್ವಿ ನಟನಲ್ಲ, ಆದರೆ ಕಾರಂತರು ನನ್ನನ್ನು ನಟನನ್ನಾಗಿ ಮಾಡಿದ್ದರು. ಈ ಕಾರಣದಿಂದಲೇ ನಂತರದ ದಿನಗಳಲ್ಲಿ ನಾನು ರಂಗ ನಾಟಕಗಳಲ್ಲಿ ಪಾಲುಗೊಳ್ಳಲಿಲ್ಲ" ಎಂದು ಹೇಳಿದರು. ಆದರೆ, ತಾವು ನಟಿಸುವ ಸಿನೆಮಾ ಪಾತ್ರಗಳಲ್ಲಿ ತನ್ಮಯರಾಗಲು ಯತ್ನಿಸುವ ಅವರ ಕಲಾನಿಷ್ಠೆಯನ್ನು ಮೆಚ್ಚಲೇಬೇಕು.

ನಾಟಕ ನೋಡುವ ಆಸಕ್ತಿ ಗಿರೀಶರಲ್ಲಿ ಮೊದಲಿನಿಂದಲೇ ಬೆಳೆದು ಬಂದಿತ್ತು. ಅವರ ತಂದೆ ತಾಯಿಯರೂ ನಾಟಕಪ್ರೇಮಿಗಳೇ ಆಗಿದ್ದರು. ತಾವು ಮಹಾರಾಷ್ಟ್ರದಲ್ಲಿದ್ದಾಗ ಮರಾಠೀ ಕಂಪನಿ ನಾಟಕಗಳನ್ನು ನೋಡಿದ್ದುದನ್ನು ಡಾ. ರಘುನಾಥರು ನನಗೆ ಹೇಳುತ್ತಿದ್ದರು. ತಾವು ನೋಡಿದ್ದ ಬಾಲಗಂಧರ್ವ, ಕಿರ್ಲೋಸ್ಕರ್ ಮುಂತಾದವರ ನಾಟಕಗಳ ಭಾಗಗಳನ್ನು ಸ್ವತಃ ಹೇಳುತ್ತ, ಆ ಕಾಲದ ನೆನಪುಗಳಲ್ಲಿ ಕಳೆದು ಹೋಗುತ್ತಿದ್ದರು. ಆ ನಾಟಕಗಳ ರಂಗಗೀತಗಳನ್ನು ರಾಗಬದ್ಧವಾಗಿ ಹಾಡತೊಡಗುತ್ತಿದ್ದರು. ಅವರ ಮಗ ವಸಂತನಲ್ಲಿ ಸಂಗೀತಪ್ರಜ್ಞೆ, ಗಿರೀಶರಲ್ಲಿ ರಂಗಪ್ರಜ್ಞೆ ಬೆಳೆದು ಬಂದಿದ್ದರಲ್ಲಿ ಆಶ್ಚರ್ಯವಿಲ್ಲ. ಕೃಷ್ಣಾಬಾಯಿಯವರ ರಂಗಪ್ರಜ್ಞೆ ಮತ್ತು ಸ್ಮರಣಶಕ್ತಿಯೂ ಅದ್ಭುತವಾಗಿತ್ತು. ಕೆಲವು ಸಲ ಒಳ್ಳೆಯ ಮೂಡ್ ಬಂದೊಡನೆ ಹಳೆಯ ದಿನಗಳ ನೆನಪಿನಲ್ಲಿ ಮೈಮರೆಯುತ್ತಿದ್ದರು. ಬಾಲಗಂಧರ್ವರು ಹೇಗೆ ಸೀರೆ ಉಡುತ್ತಿದ್ದರು, ರಂಗದಲ್ಲಿ ಹೇಗೆ ನಿಲ್ಲುತ್ತಿದ್ದರು, ಹೇಗೆ ಸುಳಿದಾಡುತ್ತಿದ್ದರು ಮುಂತಾದುವನ್ನು ಅಭಿನಯಿಸಿ ತೋರಿಸತೊಡಗುತ್ತಿದ್ದರು.

ಶಿರಸಿಯಲ್ಲಿ ಮಾರಿಕಾಂಬಾ ಜಾತ್ರೆಯ ಹೊತ್ತಿಗೆ ತಿಂಗಳಾನುಗಟ್ಟಲೆ ಕ್ಯಾಂಪ್ ಹಾಕುತ್ತಿದ್ದ ನಾಟಕಗಳನ್ನು ಡಾ. ರಘುನಾಥರು ಕುಟುಂಬದ ಎಲ್ಲರೊಡನೆ ಹೋಗಿ ನೋಡುತ್ತಿದ್ದರು. ಆಗ ಬರುತ್ತಿದ್ದ ಜಮಖಂಡಿ ಕಂಪನಿ, ಗೋಕಾಕ ಶಾರದಾ ನಾಟಕ ಮಂಡಳಿ, ಸಿದ್ದಾಪುರದ ಜಯಕರ್ನಾಟಕ ನಾಟಕ ಮಂಡಳಿ ಮುಂತಾದ ಕಂಪನಿಗಳ ಸಂಗೀತ ನಾಟಕಗಳನ್ನು ಮತ್ತು ಯಕ್ಷಗಾನಗಳನ್ನು ನೋಡಿದ ಪ್ರಭಾವ ತಮ್ಮ ಮೇಲೆ ಇದೆ ಎಂಬುದನ್ನು ಗಿರೀಶ ಅಭಿಮಾನದಿಂದ ನೆನೆಯುತ್ತಿದ್ದರು. ಮೊದಲಿನಿಂದಲೂ ಕವಿಯಾಗಬೇಕು ಎಂದು ಹಂಬಲಿಸುತ್ತಿದ್ದ ತಾನು ನಿಧಾನ ನಾಟಕಕವಿಯಾದೆ ಎಂದು ನಗುತ್ತ ಹೇಳುತ್ತಿದ್ದರು.

***

'ಸಂಸ್ಕಾರ', 'ವಂಶವೃಕ್ಷ', 'ಕಾಡು', 'ತಬ್ಬಲಿಯು ನೀನಾದೆ ಮಗನೆ', 'ಒಂದಾನೊಂದು ಕಾಲದಲ್ಲಿ' ಮುಂತಾದ ವಿಭಿನ್ನ ಬಗೆಯ ಚಲನಚಿತ್ರಗಳನ್ನು ನಿರ್ಮಿಸಿ ಪ್ರಸಿದ್ಧಿ, ಜನಪ್ರಿಯತೆ ಗಳಿಸಿದ ಗಿರೀಶ 'ಜೋಕುಮಾರಸ್ವಾಮಿ'ಯ ಫಿಲ್ಮ್ ಸ್ಕ್ರಿಪ್ಟ್ ಬರೆದು, ಸಿನೆಮಾಕ್ಕೆ ಬೇರೆ ಆಕರ್ಷಕ ಹೆಸರು ನೀಡಿ, ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ಧಾರವಾಡ ಮತ್ತು ಸವದತ್ತಿಯ ಯಲ್ಲಮ್ಮನ ನಾಡಿನಲ್ಲಿಯೇ ಸಿನೆಮಾ ತಯಾರಿಸಲು ನಿರ್ಧರಿಸಿದ್ದರು. ಶಂಕರನಾಗ್ ಮುಂತಾದವರ ತಂಡದೊಂದಿಗೆ ಸುತ್ತಾಡಿ, ಸ್ಥಳಗಳನ್ನು ಸಹ ನೋಡಿಕೊಂಡು ಬಂದಿದ್ದರು. ಆ ಸಲ ಮೊದಲ ಬಾರಿಗೆ ಉತ್ತರ ಕರ್ನಾಟಕದ ಹೆಚ್ಚಿನ ಕಲಾವಿದರನ್ನು, ತಾಂತ್ರಿಕ ವರ್ಗದವರನ್ನು ಜೊತೆಗೆ ಇಟ್ಟುಕೊಂಡು ಸಿನೆಮಾ ಮಾಡಲು ಯೋಚಿಸಿದ್ದರು. ಸದರೀ ಸಿನೆಮಾದಲ್ಲಿ ಬರುವ ಲಿಂಗಾಯತ ಸಂಪ್ರದಾಯಗಳು, ಪೂಜಾ ವಿಧಾನ ಮುಂತಾದುವನ್ನು ನಿರ್ವಹಿಸುವ ಹೊಣೆಯನ್ನು ಹೇಮಾಳಿಗೆ ವಹಿಸಿದ್ದರು; ಒಂದು ಚಿಕ್ಕ ಪಾತ್ರವನ್ನೂ ಅವಳಿಗಾಗಿ ಮೀಸಲಿರಿಸಿದ್ದರು. ಕೆಲವು ದಿನಗಳಿಂದ ತಮ್ಮ ಮನೆಯಲ್ಲಿ ನಡೆದ ಸಂದರ್ಶನದಲ್ಲಿ ನಟಿಯರ ಆಯ್ಕೆಯ ಸಂದರ್ಭದಲ್ಲಿಯೂ, ಮಿತಾ ವಶಿಷ್ಠ ಅವರು ಬಂದಾಗಲೂ ಹೇಮಾಳನ್ನು ಕರೆಸಿಕೊಂಡಿದ್ದರು. ನಟಿಯರಿಗಾಗಿ ವಿಶಿಷ್ಟ ಬಟ್ಟೆಬರೆ ಖರೀದಿಸುವಾಗಲೂ ಅವಳನ್ನು ಕರೆದುಕೊಂಡು ಹೋಗಿದ್ದರು. ಬೇಕಾಗುವ